## ರಾಷ್ಟ್ರೀಯ ಕಾನೂನು ವಿಶ್ವ ವಿದ್ಯಾಲಯದಿಂದ ಸಲಹೆ; ಮಾದರಿ ಕಾಯ್ದೆಗೆ ಮನವಿ

# ‘ಶಾಸನಬದ್ಧ ಕನಿಷ್ಠ ಬೆಲೆ ಜಾರಿಯಾಗಲಿ’

ಪ್ರಜಾವಾಣಿ ವಾರ್ತೆ



ಗದುಗಿನ ಜಿಲ್ಲಾಡಳಿತ ಭವನದಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಪ್ರಕಾಶ್ ಕಮ್ಮರಡಿ ಮಾತನಾಡಿದರು. ಡಿಸಿ ಎನ್.ಎಸ್. ಪ್ರಸನ್ನಕುಮಾರ, ಆಯೋಗದ ಸದಸ್ಯ ಹನುಮಗೌಡ ಬೆಳಗುರ್ಕಿ ಇದ್ದಾರೆ

**ಗದಗ:** ರಾಜ್ಯ ಸರ್ಕಾರ ಬೆಂಬಲ ಬೆಲೆ ಯೋಜನೆಯಡಿ ರೈತರಿಂದ ಒಂದು ಕ್ವಿಂಟಲ್ ಈರುಳ್ಳಿಯನ್ನು ಕನಿಷ್ಠ ₹1100ದರದಲ್ಲಿ ಖರೀದಿಸಲು ಕೇಂದ್ರದ ಅನುಮತಿ ಕೇಳಿತ್ತು. ಆದರೆ, ಖರೀದಿಗೆ ಮಾತ್ರ ಅನುಮತಿ ನೀಡಿದ ಕೇಂದ್ರ, ರಾಜ್ಯ ಸರ್ಕಾರ ನಿಗದಿಪಡಿಸಿದ ಬೆಲೆಯನ್ನು ಒಪ್ಪಲಿಲ್ಲ.

ಈರುಳ್ಳಿ ಆವಕ ಹೆಚ್ಚಾದ ಹಿನ್ನೆಲೆಯಲ್ಲಿ ಅನಿವಾರ್ಯವಾಗಿ ರೈತರಿಂದ ಕ್ವಿಂಟಲ್‌ಗೆ ₹624 ದರದಲ್ಲಿ ಈರುಳ್ಳಿ ಖರೀದಿಸಲಾಗುತ್ತಿದೆ ಎಂದು ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಪ್ರಕಾಶ್ ಕಮ್ಮರಡಿ ಹೇಳಿದರು.

ಶನಿವಾರ ಇಲ್ಲಿ ಜಿಲ್ಲಾಡಳಿತ ಭವನದಲ್ಲಿ ಈರುಳ್ಳಿ ಬೆಂಬಲ ಬೆಲೆ ಖರೀದಿಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿ, ಕೃಷಿ ಮತ್ತು ತೋಟಗಾರಿಕೆ ಇಲಾಖೆ ಅಧಿಕಾರಿಗಳ ಜತೆ ಸಭೆ ನಡೆಸಿದ ಅವರು, ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಈ ಬೆಂಬಲ ಬೆಲೆಯಿಂದ ರೈತರಿಗೆ ಸಂಪೂರ್ಣ ಸಹಾಯ ಆಗಿದೆ ಎಂಬ ಭರವಸೆ ಇಲ್ಲ. ಆದರೆ ಸಹಾಯವಂತೂ ಆಗಿದೆ ಎಂದರು.

**ಎಸ್‌ಎಂಪಿ:** ಒಂದು ಕೆಜಿ ಈರುಳ್ಳಿ ಬೆಳೆಯಲು ₹11 ಖರ್ಚಾಗುತ್ತದೆ. ಕನಿಷ್ಠ ಈ ಬೆಲೆಯಾದರೂ ರೈತರಿಗೆ ಲಭಿಸಬೇಕು ಎಂದು ಕೇಂದ್ರಕ್ಕೆ ಮನವಿ ಮಾಡಿದ್ದೆವು. ಬೆಂಬಲ ಬೆಲೆ ನಿಗದಿ ವಿಷಯದಲ್ಲಿ ಸಂಪೂರ್ಣ ತೀರ್ಮಾನ ತೆಗೆದುಕೊಳ್ಳುವ ಅವಕಾಶ ರಾಜ್ಯಕ್ಕೆ ಇಲ್ಲ. ಹೀಗಾಗಿ ಬೆಂಬಲ ಬೆಲೆಗೆ ಶಾಸನಬದ್ಧ ಸ್ವರೂಪ ಸಿಗಬೇಕು.

ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಬದಲು ಶಾಸನಬದ್ಧ ಕನಿಷ್ಠ ಬೆಲೆ (ಎಸ್‌ಎಂಪಿ) ಜಾರಿಯಾಗಬೇಕು. ಬೆಲೆ ಆಯೋಗವೂ ಇದನ್ನು ಸ್ಪಷ್ಟವಾಗಿ ಹೇಳಿದೆ. ಇದಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯದಿಂದ ಕಾನೂನು ಸಲಹೆ ಪಡೆಯಲಾಗಿದೆ. ಸಾಧ್ಯವಾದರೆ ‘ಮಾದರಿ ಕಾಯ್ದೆ’ಯನ್ನೇ ಸಿದ್ಧಪಡಿಸಿ ಕೊಡಿ ಎಂದು ಕೇಳಿದ್ದೇವೆ ಎಂದರು.

**ದೀರ್ಘಾವಧಿ ಪರಿಹಾರ:** ಈರುಳ್ಳಿ ಬೆಲೆ ಸಮಸ್ಯೆಗೆ ದೀರ್ಘಾವಧಿ ಪರಿಹಾರ ಕಂಡುಕೊಳ್ಳಬೇಕಿದೆ. ಈ ನಿಟ್ಟಿನಲ್ಲಿ ಈರುಳ್ಳಿ ಮೌಲ್ಯವರ್ಧನೆ ಕುರಿತು ಚಿಂತನೆ ನಡೆದಿದೆ. ಬಿಸಿಯೂಟ ಯೋಜನೆ, ಸರ್ಕಾರಿ ವಸತಿ ನಿಲಯಗಳಲ್ಲಿ ಈರುಳ್ಳಿ ಪೇಸ್ಟ್ ಬಳಕೆಗೆ ಉತ್ತೇಜನ ನೀಡಲಾಗುವುದು, ರಫ್ತು ಗುಣಮಟ್ಟ ಇರುವ ಈರುಳ್ಳಿ ತಳಿಯನ್ನು ಬೆಳೆಯುವಂತೆ ರೈತರಿಗೆ ಸಲಹೆ ನೀಡಲಾಗುವುದು. ಈ ಎಲ್ಲ ಮಾರುಕಟ್ಟೆ ಸಾಧ್ಯತೆಗಳ ಕುರಿತು ಚರ್ಚಿಸಲು ಶೀಘ್ರದಲ್ಲೇ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ (ಐಐಎಚ್‌ಆರ್) ಸಹಭಾಗಿತ್ವದಲ್ಲಿ 1 ದಿನ ಕಾರ್ಯಾಗಾರ ಆಯೋಜಿಸುವಂತೆ ಜಿಲ್ಲಾ ಕೃಷಿ ಇಲಾಖೆ ಜಂಟಿ ನಿರ್ದೇಶಕರಿಗೆ ಸೂಚನೆ ನಿಡಿದ್ದೇವೆ ಎಂದು ಅವರು ಹೇಳಿದರು.

ರೈತರು ಈರುಳ್ಳಿ ಗ್ರೇಡಿಂಗ್ ಮಾಡಿಕೊಂಡು ಮಾರುಕಟ್ಟೆಗೆ ತಂದರೆ ಗರಿಷ್ಠ ಬೆಲೆ ಲಭಿಸಲಿದೆ. ಈ ನಿಟ್ಟಿನಲ್ಲಿ ರೈತರಿಗೆ ಅನುಕೂಲ ಕಲ್ಪಿಸಲು, ಹೋಬಳಿ ಮಟ್ಟದಲ್ಲಿ ಗ್ರೇಡಿಂಗ್ ಯಂತ್ರ ಅಳವಡಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

### ಮುಖ್ಯಾಂಶಗಳು

- ಈರುಳ್ಳಿ ಮಾರುಕಟ್ಟೆ ಮೌಲ್ಯವರ್ಧನೆಗೆ ಸಲಹೆ
- 1ದಿನದ ಕಾರ್ಯಾಗಾರ ಆಯೋಜಿಸಲು ಸೂಚನೆ
- ಬೆಳೆಗಳ ಮೇಲೆ ಬರ ಪ್ರಭಾವದ ಕುರಿತು ಅಧ್ಯಯನ

**ಬೆಂಬಲ ಬೆಲೆಗೆ ಶಾಸನಬದ್ಧ ಸ್ವರೂಪ ಸಿಗಬೇಕು. ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಬದಲು ಶಾಸನಬದ್ಧ ಕನಿಷ್ಠ ಬೆಲೆ (ಎಸ್‌ಎಂಪಿ) ಜಾರಿಯಾಗಬೇಕು**

**ಪ್ರಕಾಶ್ ಕಮ್ಮರಡಿ**
ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ

## ಈರುಳ್ಳಿ ಬೆಳೆ ಪ್ರದೇಶ 10 ಸಾವಿರ ಹೆಕ್ಟೇರ್ ಹೆಚ್ಚಳ

ಆಯಾ ಜಿಲ್ಲೆಗಳ ಮಣ್ಣಿನ ಗುಣಮಟ್ಟ, ಹವಾಗುಣಕ್ಕೆ ತಕ್ಕಂತೆ ಬೆಳೆಯಲ್ಲಿ ಬದಲಾವಣೆ ಆಗಬೇಕು. ಇತಿಮಿತಿ ಇಲ್ಲದೆ ಒಂದೇ ಬೆಳೆಯನ್ನು ಬೆಳೆದರೆ ಅಸಮತೋಲನ ಆಗುತ್ತದೆ. ಕಳೆದ ಒಂದು ದಶಕದಲ್ಲಿ ಗದಗ ಜಿಲ್ಲೆಯಲ್ಲಿ ಈರುಳ್ಳಿ ಬೆಳೆಯುವ ಪ್ರದೇಶ 10562 ಹೆಕ್ಟೇರ್‌ಗಳಷ್ಟು ಹೆಚ್ಚಿದೆ.

ಮುಸುಕಿನ ಜೋಳ ಬೆಳೆಯುವ ಪ್ರದೇಶವೂ 19444 ಹೆಕ್ಟೇರ್‌ಗಳಷ್ಟು ಹಿಗ್ಗಿದೆ. ಹೀಗೆ ಒಂದೇ ಬೆಳೆಯನ್ನು ಹೆಚ್ಚಾಗಿ ಬೆಳೆದರೆ ರೈತರಿಗೆ ಉತ್ತಮ ಬೆಲೆ ಲಭಿಸುವುದಿಲ್ಲ. ಇದರ ಬದಲು ಜಿಲ್ಲಾವಾರು ಬೆಳೆ ಯೋಜನೆ ಸಮರ್ಪಕವಾಗಿ ಜಾರಿಯಾಗಬೇಕು ಎಂದು ಪ್ರಕಾಶ್ ಕಮ್ಮರಡಿ ಹೇಳಿದರು.

ಬೆಳೆಗಳ ಉತ್ಪಾದನಾ ವೆಚ್ಚವನ್ನು, ಆಯಾ ಬೆಳೆಗಳ ಇಳುವರಿ ಅವಧಿಯಲ್ಲೇ ರೈತರ ಸಹಭಾಗಿತ್ವದಲ್ಲಿ ವೈಜ್ಞಾನಿಕವಾಗಿ ಲೆಕ್ಕಹಾಕಿ,ಆಯೋಗವು ಸರ್ಕಾರ ಮುಂದಿಟ್ಟಿದೆ. ಈ ವರದಿ ಆಧರಿಸಿ, ರಾಜ್ಯ ಸರ್ಕಾರ ಕೇಂದ್ರ ಸರ್ಕಾರ ನಿಗದಿಪಡಿಸಿದ್ದಕ್ಕಿಂತಲೂ ಹೆಚ್ಚಿನ ಬೆಂಬಲ ಬೆಲೆಯನ್ನು ರಾಗಿ ಮತ್ತು ಭತ್ತಕ್ಕೆ ನೀಡಿದೆ.

2017ರ ಜನವರಿಯಿಂದ ತೊಗರಿ ಬೆಳೆಯನ್ನೂ ಪಡಿತರದಲ್ಲಿ ನೀಡಬೇಕೆಂಬ ಆಯೋಗದ ಪ್ರಸ್ತಾವವನ್ನು ಸರ್ಕಾರ ಒಪ್ಪಿದೆ ಎಂದರು.

ಹೆಸರು,ಕಡಲೆ,ತೊಗರಿ, ಜೋಳ ಸೇರಿದಂತೆ 27 ಬೆಳೆಗಳ ಮೇಲೆ ಬರ ಹೇಗೆ ಪ್ರಭಾವ ಬೀರಿದೆ ಎನ್ನುವುದನ್ನೂ ಕೃಷಿ ಬೆಲೆ ಆಯೋಗ ಅಧ್ಯಯನ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸಿದೆ ಎಂದೂ ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಸುದ್ದಿ 2 ನಿಮಿಷ

# 8 ಜಿಲ್ಲೆಗಳಲ್ಲಿ ರೈತರ ಆರ್ಥಿಕ ಸ್ಥಿತಿಗತಿ ಸಮೀಕ್ಷೆ

ಗದಗ: ರಾಜ್ಯದ ಎಂಟು ಜಿಲ್ಲೆಗಳ ತಲಾ ಒಂದೊಂದು ಗ್ರಾಮದಲ್ಲಿ ರೈತರ ಆರ್ಥಿಕ ಸ್ಥಿತಿಗತಿ ಕುರಿತು ಸಮೀಕ್ಷೆ ನಡೆಸಲಾಗುವುದು ಎಂದು ಕೃಷಿ ಬೆಲೆ ಆಯೋಗದ ಅಧ್ಯಕ್ಷ ಪ್ರಕಾಶ್ ಕಮ್ಮರಡಿ ವಿವರಿಸಿದರು.

ಬೆಂಗಳೂರಿನಲ್ಲಿರುವ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆ (ಐಸೆಕ್) ಈ ಕುರಿತು ಸಮೀಕ್ಷೆ ನಡೆಸಲಿದ್ದು, ಇದಕ್ಕೆ ಶೀಘ್ರದಲ್ಲೇ ಅನುದಾನ ಬಿಡುಗಡೆ ಮಾಡಲಾಗುವುದು. ಇದೊಂದು ಪ್ರಾಥಮಿಕ ಹಂತದ ಸಮೀಕ್ಷೆ ಎಂದು ಅವರು ತಿಳಿಸಿದರು.

ಕೊಪ್ಪಳ, ಚಿತ್ರದುರ್ಗ, ತುಮಕೂರು, ಕಲ್ಬುರ್ಗಿ, ರಾಯಚೂರು, ಬೆಳಗಾವಿ, ಕೋಲಾರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಈ ಸಮೀಕ್ಷೆ ನಡೆಯಲಿದೆ. 'ರೈತ ಕುಟುಂಬದ ಆರ್ಥಿಕ ಸ್ಥಿತಿಗತಿ, ಬೆಳೆದ ಬೆಳೆಗಳಿಗೆ ಯೋಗ್ಯ ಬೆಲೆ ಸಿಗುತ್ತಿದೆಯೇ? ಕೃಷಿ ಉತ್ಪಾದನೆಯು ಕುಟುಂಬ ನಿರ್ವಹಣೆಗೆ ಸಾಲುತ್ತಿದೆಯೇ ಸೇರಿದಂತೆ ಆದಾಯ ಮತ್ತು ಆರೋಗ್ಯದ ಬಗ್ಗೆ ಸಮಗ್ರ ಮಾಹಿತಿ ಕಲೆ ಹಾಕಲಾಗುವುದು.

ರೈತರ ಆರೋಗ್ಯ ತಪಾಸಣೆ ನಡೆಸಿ ಆರೋಗ್ಯ ಕಾರ್ಡ್ ನೀಡಲಾಗುವುದು. ಮಣ್ಣಿನ ಗುಣಮಟ್ಟದ ಕಾರ್ಡ್ ಕೂಡ ನೀಡಲಾಗುವುದು' ಎಂದರು. ಈ ಸಮೀಕ್ಷೆಗೆ ಕೃಷಿ ಬೆಲೆ ಆಯೋಗವು ಮಾನವ ಸಂಪನ್ಮೂಲ ಒದಗಿಸಲಿದೆ. ಜಿಲ್ಲಾಡಳಿತ ಮತ್ತು ಕೃಷಿ ವಿಜ್ಞಾನ ಕೇಂದ್ರದ ತಜ್ಞರು ಸಹಕಾರ ನೀಡಲಿದ್ದಾರೆ. ರೈತರ ಆದಾಯ ಹೆಚ್ಚಿಸುವುದು ಈ ಸಮೀಕ್ಷೆಯ ಮುಖ್ಯ ಉದ್ದೇಶ ಎಂದರು.

